**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>**

**<u>ಸಿಸಿ ನಂಃ 56/2022</u>**

| | | |
|---|---|---|
| ಹೆಸರು | ಎಂ. ಎಸ್ ಕಾರ್ತಿಕ್ | ಸಿ.ಡಬ್ಲ್ಯೂ 9 |
| ತಂದೆಯ ಹೆಸರು | ಶಿವಕುಮಾರ್ | ಪಿ.ಡಬ್ಲ್ಯೂ 5 |
| ವಯಸ್ಸು | 21 ವರ್ಷ | |
| ಉದ್ಯೋಗ | ಬೆಂಗಳೂರಿನಲ್ಲಿ ಕೆಲಸ | |
| ವಾಸ ಸ್ಥಳ | ಮಳವಳ್ಳಿ | |

ಸಾಕ್ಷಿಗೆ ದಿನಾಂಕಃ 24.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ ಃ</u>**

ನಾನು ಈಗ ನೋಡುತ್ತಿರುವ ನಿಪಿ-2ಕ್ಕೆ 2022 ರಲ್ಲಿ ಅಪಘಾತದ ಸಂಬಂದವಾಗಿ ಮಳವಳ್ಳಿಯ ಚಿಪ್ಸ ಅಂಗಡಿ ಮುಂಭಾಗ ಪೋಲೀಸರು ಸ್ಥಳ ಪರಿಶೀಲನೆ ಮಾಡಿದಾಗ ಸಹಿ ಮಾಡಿರುತ್ತೇನೆ. ಸಾಕ್ಷಿಯು ತನ್ನ ಸಹಿಯನ್ನು ಒಪ್ಪಿಕೊಂಡ ಕಾರಣ ಸದರಿ ಸಹಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃಆರೋಪಿ ಪರ ಶ್ರೀ ಹೆಚ್.ವಿ. ವಕೀಲರಿಂದ**

ಮಹಜರ್ ಗೆ ಸಹಕರಿಸುವಂತೆ ಪೋಲೀಸರು ನನಗೆ ನೋಟೀಸು ನೀಡಿರಲಿಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಕ್ಯಾಂಟರ್ ನಂಬರ್ ಗೊತ್ತಿರುವುದಿಲ್ಲ. ಮೃತ ವ್ಯಕ್ತಿಯು ನಮ್ಮ ಗ್ರಾಮದವರು ಎಂದರೆ ಸರಿ. ಮೃತ ವ್ಯಕ್ತಿಯು ನಮ್ಮ ಗ್ರಾಮದವರು ಅದ ಕಾರಣ ಪರಿಹಾರದ ಅರ್ಜಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-2ಕ್ಕೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಮಳವಳ್ಳಿ.